ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 : ಜೂನ್ 6, 2020**

# ಪತ್ರಿಕಾ ಪ್ರಕಟಣೆ

## ಕಂದಾಯ ಸಚಿವರಿಂದ ಬೆಂಗಳೂರು ಮೇಘ ಸಂದೇಶ ಮೊಬೈಲ್ ಆಪ್ ಹಾಗೂ ವರುಣಮಿತ್ರ ಅಂತರ್ಜಾಲ ತಾಣದ ಬಿಡುಗಡೆ

ಬೆಂಗಳೂರು, ಜೂನ್ 6 (ಕರ್ನಾಟಕ ವಾರ್ತೆ) :

ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರ ( ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ) ನ ಸಹಯೋಗದೊಂದಿಗೆ ರಾಜ್ಯ ಸರ್ಕಾರದ ಕಂದಾಯ ಇಲಾಖಾ ವ್ಯಾಪ್ತಿಯ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಅಭಿವೃದ್ಧಿಪಡಿಸಿರುವ ಮಳೆ, ಗುಡುಗು ಮತ್ತು ಸಿಡಿಲು ಸಹಿತ ಮಳೆ, ಪ್ರವಾಹ, ತಾಪಮಾನ, ಆರ್ದ್ರತೆ, ಗಾಳಿಯ ವೇಗ ಒಳಗೊಂಡಂತೆ ಹವಾಮಾನ ಮುನ್ಸೂಚನೆ ನೀಡುವ ಬೆಂಗಳೂರು ಮೇಘ ಸಂದೇಶ ಮೊಬೈಲ್ ಆಪ್ ಹಾಗೂ ವರುಣಮಿತ್ರ ಅಂತರ್ಜಾಲ ತಾಣವನ್ನು ರಾಜ್ಯ ಪ್ರಕೃತಿ ವಿಕೋಪ ನಿರ್ವಹಣಾ ಪ್ರಾಧಿಕಾರದ ಉಪಾಧ್ಯಕ್ಷರೂ ಆದ ಕಂದಾಯ ಸಚಿವ ಆರ್ ಅಶೋಕ ಅವರು ಇಲ್ಲಿ ಇಂದು ಬಿಡುಗಡೆ ಬಿಡುಗಡೆ ಮಾಡಿದರು.

ರಾಷ್ಟ್ರದಲ್ಲೇ ಪ್ರಪ್ರಥಮ ಬಾರಿಗೆ ಸಾರ್ವಜನಿಕರಿಗೆ ಹವಾಮಾನ ಮುನ್ಸೂಚನಾ ಮಾಹಿತಿ ಒದಗಿಸುವ ಈ ಆಪ್ ಅಧಿಕಾರಿಗಳಿಗೆ ಮಾತ್ರವಲ್ಲದೆ, ಸಾರ್ವಜನಿಕರಿಗೂ ಲಭ್ಯವಿರುವುದರಿಂದ ನೈಸರ್ಗಿಕ ಅವಘಡಗಳನ್ನು ತಪ್ಪಿಸಲು ಸಹಕಾರಿಯಾಗಲಿದೆ ಎಂದು ಅವರು ಅಭಿಪ್ರಾಯಪಟ್ಟರು.

ಬೆಂಗಳೂರು ಮಹಾನಗರದಲ್ಲಿ ಪ್ರತಿ ಏಳು ಚದುರ ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಒಂದರಂತೆ ಒಂದು ನೂರು ಮಳೆ ಮಾಪನಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಅಲ್ಲದೆ, 59 ಚದುರ ಕಿಲೋ ಮೀಟರ್ ವ್ಯಾಪ್ತಿಯಲ್ಲಿ 12 ಹವಾಮಾನ ಮಾಪನಾ ಕೇಂದ್ರಗಳನ್ನೂ ಸ್ಥಾಪಿಸಲಾಗಿದೆ. ರಾಜ್ಯದಲ್ಲಿ ಪ್ರತಿ ಗ್ರಾಮ ಪಂಚಾಯತ್‌ಗೆ ಒಂದರಂತೆ

ಮಳೆ ಮತ್ತು ಉಷ್ಣಾಂಶ ಮಾಪನಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜೊತೆಗೆ ಬೆಂಗಳೂರು ಜಲ ಮಂಡಳಿ, ಬೆಂಗಳೂರು ವಿದ್ಯುತ್ ಪ್ರಸರಣಾ ನಿಗಮ, ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆ ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಗಳ ಸಮನ್ವಯದೊಂದಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಂಟೂ ವಲಯಗಳಲ್ಲಿ ಮಳೆ ಬರುವ ಮುನ್ನವೇ ವಿಪತ್ತು ತಡೆಯಬಹುದಾದ ಎಲ್ಲಾ ರೀತಿಯ ಮುನ್ನೆಚ್ಚರಿಕಾ ಕ್ರಮಗಳನ್ನೂ ಕೈಗೊಳ್ಳಲಾಗಿದೆ ಎಂದು ಸಚಿವರು ಹೇಳಿದರು.

ರಾಷ್ಟ್ರೀಯ ವಿಪತ್ತು ಸ್ಪಂದನಾ ನಿಧಿಯಿಂದ ಕಳೆದ ವರ್ಷ ರಾಜ್ಯಕ್ಕೆ 386 ಕೋಟಿ ರೂ ಅನುದಾನ ಬಿಡುಗಡೆಯಾಗಿತ್ತು. ಕೇಂದ್ರ ಸರ್ಕಾರ ಈ ಬಾರಿ ಈ ಮೊತ್ತವನ್ನು 1036 ಕೋಟಿ ರೂ ಗಳಿಗೆ ಹೆಚ್ಚಿಸಿದ್ದು, ಈಗಾಗಲೇ 308 ಕೋಟಿ ರೂ ಬಿಡುಗಡೆ ಮಾಡಿದೆ ಎಂದು ಅಶೋಕ ಅವರು ತಿಳಿಸಿದರು.

ಕೆರೆಕಟ್ಟೆಗಳು ಹಾಗೂ ರಾಜಕಾಲುವೆಗಳನ್ನು ಮುಚ್ಚಿರುವ ಈ ಮಾನವ ನಿರ್ಮಿತ ಸಮಸ್ಯೆಯ ಹಿನ್ನೆಲೆಯಲ್ಲಿ ನಾವಿಂದು ಮತ್ತಷ್ಟು ಹೆಚ್ಚಾಗಿ ಪ್ರಕೃತಿ ವಿಕೋಪಕ್ಕೆ ತುತ್ತಾಗುತ್ತಿದ್ದೇವೆ ಎಂದ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಯವರೂ ಆದ ಯಲಹಂಕ ಶಾಸಕ ಎಸ್ ಆರ್ ವಿಶ್ವನಾಥ್ ಅವರು ತಮ್ಮ ಕ್ಷೇತ್ರದಲ್ಲಿ ಸಧ್ಯದಲ್ಲಿಯೇ ರಾಷ್ಟ್ರೀಯ ವಿಪತ್ತು ಸ್ಪಂದನಾ ಪಡೆಯ ಕೇಂದ್ರ ಪ್ರಾರಂಭಿಸಲು ಚಿಂತನೆ ನಡೆದಿದೆ ಎಂಬ ಅಂಶವನ್ನು ಬಹಿರಂಗಗೊಳಿಸಿದರು.

ಸಾಮುದಾಯಿಕ ಮಟ್ಟದಲ್ಲಿ, ವಿಶೇಷವಾಗಿ ತಳಮಟ್ಟದಲ್ಲಿ, ತಂತ್ರಜ್ಞಾನವನ್ನು ಅಳವಡಿಸಿಕೊಂಡು ಪ್ರಕೃತಿ ವಿಕೋಪದ ಪರಿಣಾಮಗಳನ್ನು ತಡೆಗಟ್ಟುವತ್ತ ದೊಡ್ಡ ಹೆಜ್ಜೆಯನ್ನಿಟ್ಟಿದ್ದೇವೆ ಎಂದ ಕಂದಾಯ ಇಲಾಖೆಯ ವಿಪತ್ತು ನಿರ್ವಹಣಾ ವಿಭಾಗದ ಸರ್ಕಾರದ ಪ್ರಧಾನ ಕಾರ್ಯದರ್ಶಿ ಟಿ ಕೆ ಅನಿಲ್ ಕುಮಾರ್ ಅವರು ಇನ್ನೆರಡು ಅಥವಾ ಮೂರು ವಾರಗಳಲ್ಲಿ ರಾಜ್ಯ ಸರ್ಕಾರದ ಪ್ರಕೃತಿ ವಿಕೋಪ ಯೋಜನೆ ಸಿದ್ಧವಾಗಲಿದೆ. ವಿಪತ್ತು ನಿರ್ವಹಣಾ ವ್ಯವಸ್ಥೆಯಲ್ಲಿ ಮುಂದಿನ ಮೂರು-ನಾಲ್ಕು ತಿಂಗಳುಗಳಲ್ಲಿ ಹಲವಾರು ಬದಲಾವಣೆಗಳನ್ನು ಕಾಣಬಹುದಾಗಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಮಳೆಯ ಪ್ರಮಾಣ ಹೆಚ್ಚಾಗಿದೆ. ಆದರೆ, ಮಳೆ ಬೀಳುವ ದಿನಗಳ ಸಂಖ್ಯೆ ಕಡಿಮೆಯಾಗಿದೆ. ಒಂದು ತಿಂಗಳಲ್ಲಿ ಬೀಳುವ ಮಳೆ ಒಂದೇ ದಿನ ಬಿದ್ದ ಹಲವು ಉದಾಹರಣೆಗಳಿವೆ. ಇಂತಹ ಹವಾಮಾನ ವೈಪರೀತ್ಯಗಳ ಕುರಿತು ಮುನ್ಸೂಚನೆ ದೊರೆತರೆ ಜನ ಮತ್ತು ಜಾನುವಾರುಗಳ ಜೀವ ಹಾನಿ ಹಾಗೂ ಆಸ್ತಿ ಹಾನಿ ತಡೆಗಟ್ಟಲು ಸಾಧ್ಯವಾಗುತ್ತದೆ. ಈ ಆಪ್ ಬಿಡುಗಡೆಯಾದುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಅತ್ಯಂತ ಪರಿಣಾಮಕಾರಿಯಾಗಿ ಮತ್ತು ಸಮರ್ಥವಾಗಿ ಕಾರ್ಯನಿರ್ವಹಿಸಲಿದೆ ಎಂದು ಪಾಲಿಕೆ ಆಯುಕ್ತ ಬಿ ಹೆಚ್ ಅನಿಲ್ ಕುಮಾರ್ ಅವರು ವಿಶ್ವಾಸ ವ್ಯಕ್ತಪಡಿಸಿದರು.

ಹಿನ್ನೆಲೆ ಮಾಹಿತಿ :

ಇತೀಚಿನ ವರ್ಷಗಳಲ್ಲಿ ಪ್ರಪಂಚದಾದ್ಯಂತ ನೈಸರ್ಗಿಕ ವಿಕೋಪಗಳು ಪದೇ ಪದೇ ಸಂಭವಿಸುತ್ತಿದ್ದು. ಈ ನೈಸರ್ಗಿಕ ವಿಕೋಪಗಳಲ್ಲಿ ನಗರ ಪ್ರವಾಹವೂ ಒಂದು. ಬದಲಾದ ಹಾಗೂ ತೀವ್ರತರ ಭೂಬಳಕೆಯಿಂದಾಗಿ ಪ್ರಮುಖ ನಗರ ಪ್ರದೇಶಗಳಲ್ಲಿ ಪ್ರವಾಹ ಪರಿಸ್ಥಿತಿ ಪ್ರತಿ ಮಳೆಗಾಲದಲ್ಲೂ ಮರುಕಳಿಸುತ್ತಿರುವುದನ್ನು ಕಾಣಬಹುದಾಗಿದೆ.

ಬೆಂಗಳೂರು ನಗರ ಪ್ರದೇಶವೂ (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿ) ಸಹ ಪ್ರತಿ ವರ್ಷ ಮಳೆಗಾಲದಲ್ಲಿ ಪ್ರವಾಹಕ್ಕೆ ತುತ್ತಾಗುತ್ತಿದೆ. ನಗರೀಕರಣದ ಭಾಗವಾಗಿ ನಗರ ಪ್ರದೇಶದ ಬಹಳಷ್ಟು ಭೂಭಾಗವನ್ನು ಕಾಂಕ್ರೀಟ್ ಆವರಿಸುತ್ತಿರುವುದರಿಂದ, ಮಳೆ ನೀರು ಇಂಗಲು ಸ್ಥಳಾವಕಾಶವಿಲ್ಲದೆ ಮೇಲ್ಮೈ ಹರಿವು ಹೆಚ್ಚಾಗುತ್ತಿರುವುದು ನಗರ ಪ್ರವಾಹ ಮರುಕಳಿಸಲು ಕಾರಣ ಹಾಗೂ ನಗರ ಪ್ರದೇಶಗಳಲ್ಲಿರುವ ರಾಜಕಾಲುವೆಗಳ ಹರಿವು ಸಾಮರ್ಥ್ಯದ ಕೊರತೆಯಿಂದಾಗಿ ಅಥವಾ ಮಳೆ ನೀರು ಹರಿಯುವ ಕಾಲುವೆಗಳಲ್ಲಿ ಹೂಳು ತುಂಬಿರುವುದು /ಘನತ್ಯಾಜ್ಯ ಶೇಖರಣೆಯಿಂದಾಗಿ ಮಳೆ ನೀರು ಕಾಲುವೆಗಳಿಂದ ಉಕ್ಕಿ ಹರಿದು ಪ್ರವಾಹ ಪರಿಸ್ಥಿತಿ ನಿರ್ಮಾಣವಾಗುತ್ತಿರುವುದು ಸಾಮಾನ್ಯವಾಗಿದೆ.

ರಾಜ್ಯದಲ್ಲಿನ ವಿವಿದ ನೈಸರ್ಗಿಕ ವಿಕೋಪಗಳ ಕುರಿತು ಉಸ್ತುವಾರಿ ಜವಾಬ್ದಾರಿ ಹೊಂದಿರುವ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು. ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ಹಾಗೂ ಸಂಸ್ಥೆಗಳಿಗೆ ವಿಪತ್ತು ನಿರ್ವಹಣೆಗೆ ಅಗತ್ಯವಿರುವ ವಿಜ್ಞಾನ ಮತ್ತು ತಂತ್ರಜ್ಞಾನ ಆಧಾರಿತ ತಾಂತ್ರಿಕ ನೆರವನ್ನು ಸಕಾಲದಲ್ಲಿ ನೀಡುತ್ತಿದೆ. ಇದರ ಭಾಗವಾಗಿ **KSNDMC** ಯು ಭಾರತೀಯ ವಿಜ್ಞಾನ ಸಂಸ್ಥೆ **(IISc).** ಬೆಂಗಳೂರು ಇವರ ಸಹಯೋಗದೊಂದಿಗೆ 'ಬೆಂಗಳೂರು ನಗರ ಪ್ರವಾಹ ನಿರ್ವಹಣೆ ಮಾದರಿ' ಯನ್ನು ಅಭಿವೃದ್ಧಿಪಡಿಸಿದೆ. ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಈ ಯೋಜನೆಗೆ ಧನಸಹಾಯ ನೀಡಿದೆ. ಬೆಂಗಳೂರು ನಗರದಲ್ಲಿ ಸಂಬವಿಸುವ ಪ್ರವಾಹ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ತಂತ್ರಜ್ಞಾನ ಆಧಾರಿತ ಪರಿಹಾರವನ್ನು ಒದಗಿಸುವುದು ಈ ಯೋಜನೆಯ ಪ್ರಮುಖ ಉದ್ದೇಶ.

ಪ್ರತಿ ದಿನ ಮಳೆಯ ತೀವ್ರತೆ ಹಾಗೂ ಮಳೆ ಪ್ರಮಾಣಕ್ಕನುಗುಣವಾಗಿ ಸಂಭವನೀಯ ಪ್ರವಾಹದ ಮುನ್ಸೂಚನೆ ನೀಡುವ ಗಣಕೀಕೃತ ಜಲವಿಜ್ಞಾನ ಮಾದರಿಯನ್ನು **(hydrological model)** ಅಭಿವೃದ್ಧಿಪಡಿಸಿ ಕಾರ್ಯಗತಗೊಳಿಸಲಾಗಿದೆ.

ಈ ಯೋಜನೆಯ ಮೂಲಕ ಬೆಂಗಳೂರು ನಗರದಲ್ಲಿ ಸಂಭವಿಸಬಹುದಾದ ಮಳೆ ಮುನ್ಸೂಚನೆ. ಪ್ರವಾಹ ಮುನ್ಸೂಚನೆ ಹಾಗೂ ಮುನ್ನೆಚ್ಚರಿಕೆಗಳನ್ನು ಪ್ರತಿ ದಿನ ನಗರದ ವಿವಿಧ ಇಲಾಖೆಗಳ ವಲಯವಾರು ಅಧಿಕಾರಿಗಳಿಗೆ ನೀಡಿ ಅದನ್ನು ಸಂಬಂಧಪಟ್ಟ ಅಧಿಕಾರಿಗಳು ಸಮರ್ಪಕವಾಗಿ ಬಳಸಲು ಅಗತ್ಯವಿರುವ ತರಬೇತಿಯನ್ನು ನೀಡುವ ನಿಟ್ಟಿನಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

ಬೆಂಗಳೂರು ನಗರದ ನಿಗದಿತ ವಲಯವಾರು ಪ್ರದೇಶಕ್ಕೆ ಅನ್ವಯವಾಗಿ ಮಳೆ ಮುನ್ಸೂಚನೆ, ಪ್ರವಾಹ ಮುನ್ನೆಚ್ಚರಿಕೆಗಳನ್ನು ನೀಡಲು, 'ಬೆಂಗಳೂರು ಮೇಘ ಸಂದೇಶ' ಎಂಬ ಮೊಬೈಲ್ **App** ಅನ್ನು ಈ ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸಲಾಗಿದೆ. ಈ **App** ನ ವಿನ್ಯಾಸ ವೈಶಿಷ್ಟ್ಯ ಹಾಗೂ ಇದರಲ್ಲಿ ಒದಗಿಸಲಾಗುತ್ತಿರುವ ಮಾಹಿತಿಗಳು ಭಾರತದಲ್ಲಿ ಅನನ್ಯ. ಈ ಮಾಹಿತಿಗಳನ್ನು **www.varuna mitra.kar.gov.in** ಮೂಲಕವೂ ನೀಡಲಾಗುತ್ತದೆ.

ಬೆಂಗಳೂರು ಮೇಘ ಸಂದೇಶ **App** ನ ಮೂಲಕ ನೀಡಲಾಗುತ್ತಿರುವ ಮಾಹಿತಿಯನ್ನು ಬೆಂಗಳೂರು ನಗರದ ವಿವಿಧ ಭಾಗಗಳಲ್ಲಿ ಅಳವಡಿಸಿ ಕಾರ್ಯಗತಗೊಳಿಸಿರುವ **100** ದೂರಸ್ಥ ಮಳೆ ಮಾಪನ ಕೇಂದ್ರಗಳು, **12** ದೂರಸ್ಥ ಹವಾಮಾನ ಮಾಪನ ಕೇಂದ್ರಗಳು ಹಾಗೂ **25** ಹರಿವು ಮಾಪನ ಕೇಂದ್ರಗಳಿಂದ ನಿಜ ಸಮಯದಲ್ಲಿ ಲಭ್ಯವಾಗುವ ದತ್ತಾಂಶವನ್ನು ಆಧರಿಸಿರುತ್ತದೆ.

ಬೆಂಗಳೂರು ಮೇಘ ಸಂದೇಶ **App** ನ ವಿನ್ಯಾಸ

- ಆ **App** ಲ್ಲಿ " ಪ್ರಸ್ತುತ ಹವಾಮಾನ" "ಮುನ್ಸೂಚನೆ" ಮತ್ತು " ಸುರಕ್ಷಿತ ಮಾರ್ಗ" ಎಂಬ ಮೂರು ಪ್ರಧಾನ **Module** ಗಳನ್ನು ಒಳಗೊಂಡಿದೆ.
- "ಪ್ರಸ್ತುತ ಹವಾಮಾನ" ಟ್ಯಾಬ್ ನಿಗದಿತ ಪ್ರದೇಶದ ಪ್ರಸ್ತುತ ಉಷ್ಣಾಂಶ, ಆರ್ದ್ರತೆ, ಮಳೆ ಪ್ರಮಾಣ, ಗಾಳಿಯ, ಹಾಗೂ ಗಾಳಿಯ ವೇಗ ದಿಕ್ಕುಗಳ ಮುನ್ಸೂಚನೆ ನೀಡುತ್ತದೆ.
- "ಮುನ್ಸೂಚನೆ" ಟ್ಯಾಬ್ ನಿಗದಿತ ಪ್ರದೇಶಕ್ಕೆ ಅನುಗುಣವಾದ ಮುಂದಿನ 3 ದಿನಗಳಿಗೆ ಉಷ್ಣಾಂಶ, ಆರ್ದ್ರತೆ, ಮಳೆ ಪ್ರಮಾಣ, ಗಾಳಿಯ ವೇಗ ಹಾಗೂ ಮೋಡದ ಕುರಿತು ಮುನ್ಸೂಚನೆಯನ್ನು ನೀಡುತ್ತದೆ.
- "ಸುರಕ್ಷಿತ ಮಾರ್ಗ" ಟ್ಯಾಬ್ ನಿರ್ದಿಷ್ಟ ಸ್ಥಳದಿಂದ ತಲುಪಬೇಕಿರುವ ಸ್ಥಳಗಳ ನಡುವೆ ಸಂಚರಿಸಲು ಪ್ರವಾಹದಿಂದಾಗಿ ಯವುದೇ ಅಡಚಣೆಯಿಲ್ಲದ ಸುರಕ್ಷಿತ ಮಾರ್ಗವನ್ನು ಸೂಚಿಸುತ್ತದೆ.
- "ಪ್ರಸ್ತುತ ಗುಡುಗು ಸಿಡಿಲು ಹಾಗು ಮಳೆ ಪಲ್ಸ್ ರಾಡ್" ಟ್ಯಾಬ್ "ಸಿಡಿಲು" **App** ಗೆ ಸಂಪರ್ಕ ಕಲ್ಪಿಸಿ ನಿಗದಿತ ಪ್ರದೇಶಕ್ಕೆ ಸಂಭವನೀಯ ಗುಡುಗು ಸಿಡಿಲಿನ ಮುನ್ನೆಚ್ಚರಿಕೆಯನ್ನು ನೀಡುತ್ತದೆ. ಟ್ಯಾಬ್ ಕೇಸರಿ ಅಥವಾ ಕೆಂಪು ಬಣ್ಣದಲ್ಲಿದ್ದರೆ, ಆ ಪ್ರದೇಶದಲ್ಲಿ ಮುಂದಿನ 30–45 ನಿಮಿಷದಲ್ಲಿ ಸಿಡಿಲು ಬಡಿತದ ಸಂಭವನೀಯತೆಯನ್ನು ಸೂಚಿಸುತ್ತದೆ. ಅದಲ್ಲದೆ, ಆ ಪ್ರದೇಶದ ವ್ಯಕ್ತಿ ಅಥವಾ ಸಮುದಾಯಗಳು ಸಿಡಿಲಿನ ಅಪಾಯದಿಂದ ತಪ್ಪಿಸಿಕೊಳ್ಳಲು ಉಪಯುಕ್ತ ಸಲಹೆ ಸೂಚನೆಯನ್ನು ನೀಡುತ್ತದೆ.
- "ಪ್ರಸ್ತುತ ಮಳೆ/ ಪ್ರವಾಹ" ಟ್ಯಾಬ್ ನಲ್ಲಿ ಹತ್ತಿರದ ಮಳೆ ಮಾಪನ ಕೆಂದ್ರದ ಮಾಹಿತಿಯನ್ನಾಧರಿಸಿ ಆ ಪ್ರದೇಶದಲ್ಲಾಗುತ್ತಿರುವ ಮಳೆ ಮಾಹಿತಿಯನ್ನು ನೀಡುತ್ತದೆ. ಪ್ರವಾಹ ಬಟನ್ ಆ ಪ್ರದೇಶದ ಹಾಗೂ ಸತ್ತಮುತ್ತಲಿನ ಪ್ರದೇಶದ ಪ್ರಸ್ತುತ ಪ್ರವಾಹ ಪರಿಸ್ಥಿತಿಯ ಮಾಹಿತಿಯನ್ನು ನೀಡುತ್ತದೆ. ಈ ಟ್ಯಾಬ್ ನೀಲಿ ಬಣ್ಣದಲ್ಲಿದ್ದರೆ ಅದು ಆ ಪ್ರದೇಶದಲ್ಲಿ ಪ್ರಸ್ತುತ ಮಳೆಯಾಗುತ್ತಿರುವುದನ್ನು ಸೂಚಿಸುತ್ತದೆ.
- "ಕನ್ನಡ/**English**" ಟ್ಯಾಬ್ , **App** ನ ಬಳಕೆದಾರರು ಮಾಹಿತಿಯನ್ನು ಈ ಎರಡು ಭಾಷೆಗಳಲ್ಲಿ ಪಡೆಯಲು ಅನುವು ಮಾಡಿಕೊಡುತ್ತದೆ.
- "ಪರಿಚಯ" ಟ್ಯಾಬ್ ಈ ಯೋಜನೆಯ ಕುರಿತು ಸಂಕ್ಷಿಪ್ತ ಮಾಹಿತಿ, **App** ನ ಬಳಸುವ ತಾಂತ್ರಿಕ ವಿಧಾನ, ಹಾಗೂ ಮುನ್ನೆಚ್ಚರಿಕೆ ಸಂದೇಶಗಳನ್ನು ಅರ್ಥೈಸಿಕೊಳ್ಳುವ ಬಗ್ಗೆ ಮಾರ್ಗದರ್ಶನ ನೀಡುತ್ತದೆ.
- "ಸುರಕ್ಷತಾ ಸಲಹೆ" ಟ್ಯಾಬ್ ನಲ್ಲಿ, ಮಳೆ ಅಥವಾ ಪ್ರವಾಹದ ಸಂಧರ್ಭಗಳಲ್ಲಿ ಆ ಪ್ರದೇಶದ ವ್ಯಕ್ತಿ ಅಥವಾ ಸಮುದಾಯ ತೆಗೆದುಕೊಳ್ಳಬೇಕಾದ ಸುರಕ್ಷತಾ ಕ್ರಮಗಳ ಬಗ್ಗೆ ಮಾಹಿತಿ ನೀಡುತ್ತದೆ.

- “ತುರ್ತು ಪರಿಸ್ಥಿತಿ” ಟ್ಯಾಬ್ ಅಗತ್ಯಕ್ಕೆ ಅನುಗುಣವಾಗಿ ಸಾರ್ವಜನಿಕರು **BBMP** ಯ ನಿಯಂತ್ರಣ ಕೊಠಡಿಯನ್ನು ಸಂಪರ್ಕಿಸಲು ಅನುವು ಮಾಡಿಕೊಡುತ್ತದೆ.
- ಈ **App** ನ್ನು **Andriod** ಮತ್ತು **iOS** ಎರಡಕ್ಕೂ ಅನುವಾಗುವಂತೆ ವಿನ್ಯಾಸಗೊಳಿಸಲಾಗಿದ್ದು, ಇದನ್ನು **Google Play Store** ಮತ್ತು **App Store** ನಿಂದ ಉಚಿತವಾಗಿ ಪಡೆದುಕೊಳ್ಳಬಹುದಾಗಿದೆ.
- “ಸೂಚನೆ” ಟ್ಯಾಬ್, ಈ **App** ನಲ್ಲಿ ಒದಗಿಸಲಾಗುತ್ತಿರುವ ಮಾಹಿತಿಗಳ ಕುರಿತು ಬಗ್ಗೆ ಬಳಕೆದಾರರಿಗೆ ಮಾಹಿತಿ ನೀಡುತ್ತದೆ.

ಅಂತರ್ಜಾಲ ತಾಣ– **www.varunamitra.kar.gov.in** ದಲ್ಲಿ ಒದಗಿಸಲಾಗುವ ಮಾಹಿತಿಗಳು

- ವಲಯವಾರು ಪ್ರವಾಹ ಸಂಭವನೀಯ ಪ್ರದೇಶ ನಕ್ಷೆ, ಮಳೆ ಮುನ್ಸೂಚನೆ, ಪ್ರವಾಹ ಮುನ್ಸೂಚನೆ.
- ದತ್ತಾಂಶ ಡೌನ್‌ಲೋಡ್
  (1) ಪ್ರಸ್ತುತ ಮಳೆ ಮಾಹಿತಿ
  (2) 24 ಗಂಟೆಗಳ ಸಂಚಿತ ಮಳೆ ಮಾಹಿತಿ
- ವಲಯವಾರು ರಿಯಲ್ ಟೈಮ್ ಪ್ರವಾಹ ಮಾಹಿತಿ, ನಿರ್ದಿಷ್ಟ ಸ್ಥಳದ ಪ್ರವಾಹ ಮಾಹಿತಿಯ ನಕ್ಷೆ.

Megha Sandesha A Mobile App and Varunamitra Dynamic Web portal

Bengaluru, June 6 (Karnataka Information)

The Frequency and intensity of the Natural Disaster have been increasing many folds, Present system of Disaster Management gives more weightage to Preparedness, Mitigation and Early Warning rather than Rescue and Relief. The Urban floods, one of the Disasters, is occurring frequently in major Cities than Rescue and Relief. The Urban floods, one of the Disasters, is occurring frequently in major Cities across the Country in the recent years. The Bengaluru city (Bruhat Bengaluru Mahanagara Pallike BBMP) has also been witnessing the floods during Monsoon season every year, causing huge disruption to the life of the people, loss of life and property. The Urban flood normally occurs due to lack of adequate storm water drainage in the urban areas and or blocking of storm water drains either by silt deposition garbage. As there is very little open soil space left for the

rain water to percolate in to the ground, most of the precipitation turns in to surface runoff and causes inundation or floods.

The Karnataka State Natural Disaster Monitoring Centre (KSNDMC) being the nodal agency in the state to monitor all the Natural Disasters, has been serving as a common platform to the various response players in the field of Natural Disasters, has been serving as a common platform to the various response players in the filed of Natural Management by providing timely proactive Science and Technology based inputs for managing and mitigating the impacts of Natural disasters.

As a part of the Disaster Monitoring activity KSNDMC in collaboration with the Indian Institute of Science (IISc) Bengaluru, has taken up a demand driven Project on “Urban Flood Model (UFM) for Bengaluru City” funded by Department of Science and Technology (DST) Government of India. The main Objective of the Project is to provide technology driven solution to manage and mitigate the Urban Flood in Bengaluru City. A hydrologic Model has been developed and operationalized for issuing Flood /inundation forecast for Bengaluru city for different rainfall amount and intensity.

Under this Project, KSBDMC has been providing rainfall and flood forecast and early warming to the officers of the Government Agencies in the City through SMS to their mobile phones, Social Media Platforms and dedicated web-portal. The information thus provided by KSNDMC has been of great help for the civic authorities in Bengaluru to take necessary action and effectively manage the floods in the City.

In order to disseminate the rainfall and flood forecast, location specific dynamic weather information directly to the public. KSNDMC has developed a mobile Application “Bengaluru Megha Sandesha” (BMS) as a product of the UFM project. The in-build features of the App and the information provided there on experimental bases, is first of its kind in the Country.

About Bengaluru Megha Sandesha :

The information provided through Bengaluru Megha Sandesha is based on real-time data from 100 Telemetric Rain Gauges (TRG) 12 Telemetric Weather

Sensors (TWS) and Water Level sensors installed and maintained by KSNDMC under UFM Project.

The Kannada/ English tab enables the users to access the information in either of the languages.

The major Modules in the App includes “Live Weather “ Forecast” and “Safe Route”

The Live weather “ tab provides location specific prevailing Temperature (C) Relative Humidity (%) Rainfall (mm) . Wind speed (Km/h) and Wind direction (degree)

The “Forecast” Tab gives the location wise Temperature, Relative Humidity, Rainfall, Wind Speed and Cloudiness forecast at 12 Hrs format for the next 3 days.

“Safe Route “ tab connects to the all probable routes from the current location to the destination location and gives an information if there is any live rainfall event /road inundation on the route.

The “Now cast Map: Lighting, Thunderstorm, Rainfall” connects to “SIDLU” app which provides location specific dynamic alert on Thunderstorm and lightening with 3 buffer rings (1 km. 5 km. and 15 kms) The tab turning to Orange or Red color, indicates a possible lightening activity in that location in the next 30-45 minutes. It also provides safety advisory to help the individual community to protect themselves from the impact of Thunderstorm /lighting.

The “Live rainfall map” tab gives the details about the ongoing rainfall event bases on the date obtained from the nearest TRG station.

The Live rainfall map tab provides information on real time flood condition in and around a specific location. The tab turning to Blue color indicates that the rainfall in occurring in that location.

“About” tab provides technical guidance for using different features of the App. It also gives a short description of the UFM Project, guidance on understanding the warning signs in the flood page.

The “Safety tips” for the users has been given in the form of DO’s and DONT’s during the rainfall and flood events.

The “Emergency” icon will enable the people to connect to the BBMP Emergency control room during the flood extreme rain events.

This BMS Mobile APP is designed and made available for both Android application and (ios) applications, shall be obtained from Google Play store and App Store respectively.

A Disclaimer” w.r.t. the information provided through the BMS Applications has also been given for the user information.

About “Varunamita web portal :

The information provided through “Varunamitra “web portal is based on real-time date from 100 Telemetric Rain Guages (TRG) installed and maintained by KSNDMC under UFM Project. Rainfall forecast is based on the WRF Models (Weather Research and Forecast) by the Space Applications Centre (SAC) Indian Space Research Organisation(ISRO) Ahmedabad. The information on Flood Forecast is based on the hydrological model, hydraulic routing and automation of the results.

www.varunamitra.kar.gov.in is the dedicated web portal for the weather information in BBMP area. It has the following information

Zone wise- Static Flood Vulnerable areas map in “”FVA”

Daily Rainfall forecast map

Daily Flood forecast map

Tabular date of “Current Rainfall” at any given time of the event and “24 hrs cumulative Rainfall” from 8-30 am of the previous day to 8-30 am of present day.

Real Time Weather Dash Board - gives

Zone wise live weather information on the tabular format

Location specific rainfall information on the map

Zone wise drop down list to negative to any point of interest.

Dynamic rainfall event with different rain amount like Moderate Rain. Rather Heavy Rain,. Heavy Rain, and Very Heavy Rain. The ranges of each rain event is given in the legend with colours.

Real Time Flood Information

Location specific inundation information on the map

Zone wise dropdown list to navigate to any point of interest.

Dynamic rainfall event with different rain amount like Moderate Rain, Rather Heavy Rain, Heavy Rain and Very Heavy Rain. The ranges of each rain event is given in the legend with colours.

Real Time Flood Information

Location specific inundation information on the map

Zone wise drop down list to navigate to any point of interest

Flood severity is represented in the legend with colours.

Services of KSNDMC can also be accessed through the following :

1. www.ksndmc.org 2) www.varunamitra.kar.gov.in 3) Varunamitra- A 24x7 interactive Help-Desk 9243345433 4) KSNdMC office 080- 67355000 Fax 080-67355198.

For further details on "Bengaluru Megha Sandesha" mobile app, contact Dr. Shubha Avinash Scientific Officer, KSNDMC (Email dmc.shubha@gmail.com) Mobile 9986028536

Note : This mobile application is a result of R& D work of KSNDMC and IISc. At present, the flood forecast is being generated using SWMM model. The required rainfall forecast is being generated by using WRI . Models (Weather Research and Forecast) by the Space Applications Centre (SAC) Indian Space

Research Organization (ISRO) Ahmadabad. The accuracy of the flood forecast depends on Rainfall forecast.

The KSNDMC has proposed to install Doppler Weather radar (DWR) and also to obtain LIDAR Survey data for Bengaluru to fine tune the Flood forecast model. The hydrological model and hydraulic routing will be carried out using MIKE model in future.

## ಡಿ. ದೇವರಾಜ ಅರಸು ಅವರು ಸಾಮಾಜಿಕ ನ್ಯಾಯದ ಹರಿಕಾರ : ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ

ಬೆಂಗಳೂರು, ಜೂನ್ 6 (ಕರ್ನಾಟಕ ವಾರ್ತೆ) : ಸಾಮಾಜಿಕ ನ್ಯಾಯದ ಹರಿಕಾರ ಎಂಬ ಖ್ಯಾತಿಗೆ ಪಾತ್ರರಾದ ಮಾಜಿ ಮುಖ್ಯಮಂತ್ರಿ ದಿವಂಗತ ಡಿ ದೇವರಾಜು ಅರಸು ರವರು ರಾಜ್ಯದ ಅಸಂಖ್ಯಾತ ಧ್ವನಿಯಿಲ್ಲದ ಜನಾಂಗವನ್ನು ಗುರುತಿಸಿ ಸಮಾಜದ ಮುಖ್ಯವಾಹಿನಿಗೆ ತಂದರು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ಅವರು ಇಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಡಿ. ದೇವರಾಜ ಅರಸು 38ನೇ ಪುಣ್ಯಸ್ಮರಣೆ ಅಂಗವಾಗಿ ವಿಧಾನಸೌಧ ಪಶ್ಚಿಮ ದ್ವಾರದ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದರು.

ಎಂಟು ವರ್ಷಗಳ ಕಾಲ ರಾಜ್ಯದ ಮುಖ್ಯಮಂತ್ರಿಯಾಗಿ ದೂರದೃಷ್ಟಿಯುಳ್ಳ ನಾಯಕ. ಮಾನವೀಯ ತುಡಿತ ಹೊಂದಿದ ಆಡಳಿತಗಾರರಾಗಿ ಅವರು ಕೈಗೊಂಡ ನಿರ್ಧಾರಗಳು ಚರಿತಾರ್ಹವಾದುದು ಎಂದರು.

ಅರಸು ಅವರು ಜಾರಿಗೊಳಿಸಿದ ಭೂ ಸುಧಾರಣೆ, ಜೀತಾಮುಕ್ತ, ಋಣಪರಿಹಾರ ಕಾಯ್ದೆಯಂತಹ ಕ್ರಾಂತಿಕಾರಿ ನಿರ್ಧಾರಗಳು ಬಡವರು, ತಳಸಮುದಾಯದವರು ಹಾಗೂ ಕೃಷಿ ಕಾರ್ಮಿಕರು ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಸಾಧ್ಯವಾಯಿತು.

ಇವರು ಹಿಂದುಳಿದ ವರ್ಗಗಳಿಗೆ ಉದ್ಯೋಗದಲ್ಲಿ ಮೀಸಲಾತಿ , ಸಮಾಜದ ದುರ್ಬಲ ವರ್ಗಕ್ಕೆ ಮಾಶಾಸನದ ಮೂಲಕ ಬದುಕಿಗೆ ಭದ್ರತೆ, ನಿರುದ್ಯೋಗ ಭತ್ಯೆಯ ಮೂಲಕ ವಿದ್ಯಾವಂತ

ಯುವಜನರಲ್ಲಿ ಬದುಕಿನ ಭರವಸೆಯನ್ನು ಮೂಡಿಸಿದರು. ಜೊತೆಗೆ ಹಿಂದುಳಿದ ಜನಾಂಗಕ್ಕೆ ಶಕ್ತಿ ತುಂಬುವ ಮಹತ್ವಕಾಂಕ್ಷೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದ ಕೀರ್ತಿ ದೇವರಾಜ ಅರಸು ಅವರದು.

ಇದೇ ಸಂದರ್ಭದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮುಖ್ಯಮಂತ್ರಿಗಳು ಸಸಿಯನ್ನು ನೆಟ್ಟರು.

ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಆರೋಗ್ಯ ಸಚಿವ ಶ್ರೀರಾಮುಲು, ಸಂಸದ ಬಿ.ವೈ.ರಾಘವೇಂದ್ರ ಉಪಸ್ಥಿತರಿದ್ದರು.

## ಕೋವಿಡ್-19 ಸೋಂಕು ತಡೆಗಟ್ಟಲು ಮುಂಜಾಗ್ರತಾ ಕ್ರಮ : ಸಿ.ಟಿ.ರವಿ

ಬೆಂಗಳೂರು, ಜೂನ್ 6 (ಕರ್ನಾಟಕ ವಾರ್ತೆ) : ರಾಜ್ಯದಲ್ಲಿ ಕೋವಿಡ್-19 ಸೋಂಕು ತಡೆಗಟ್ಟಲು ಮುಂಜಾಗ್ರತಾ ಕ್ರಮಕೈಗೊಳ್ಳಲಾಗಿದೆ ಎಂದು ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವ ಸಿ.ಟಿ. ರವಿ ತಿಳಿಸಿದರು.

ಅವರು ಇಂದು ವಿಧಾನಸೌಧದಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ರಾಜ್ಯಾದ್ಯಂತ ಆರಂಭವಾಗಲಿರುವ ಹೋಟೆಲ್, ರೆಸ್ಟೋರೆಂಟ್, ಜಂಗಲ್ ಲಾಡ್ಜಸ್, ಕೆ.ಎಸ್.ಟಿ.ಡಿ.ಸಿ. ಹೋಟೆಲ್‌ಗಳು ಅನುಸರಿಸಬೇಕಾದ ಕ್ರಮಗಳ ಮಾರ್ಗಸೂಚಿ ಪುಸ್ತಕವನ್ನು ಬಿಡುಗಡೆ ಮಾಡಿ ಮಾತನಾಡಿದರು.

ಜೂನ್ 08 ರಿಂದ ಹೋಟೆಲ್‌ಗಳು, ಆತಿಥ್ಯ ಘಟಕಗಳು, ಪ್ರವಾಸಿತಾಣಗಳನ್ನು ಸಾರ್ವಜನಿಕರಿಗೆ ತೆರೆಯಲು ತೀರ್ಮಾನಿಸಲಾಗಿದ್ದು, ಈ ಹಿನ್ನೆಲೆಯಲ್ಲಿ ಇವುಗಳಿಗೆ ಕೆಲ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡು ಪ್ರವಾಸಿಗರಿಗೆ ಕೋವಿಡ್-19 ಸೋಂಕು ಹರಡದಂತೆ ಮುಂಜಾಗ್ರತೆ ವಹಿಸಬೇಕು . ಈ ಕುರಿತು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಪ್ರವಾಸಿಗರಿಗೆ ಜಾಗೃತಿ ಮೂಡಿಸುವ ಅಗತ್ಯವಿದ್ದು, ಇಲಾಖೆಯು ಸಮಗ್ರ ಮಾರ್ಗ ಸೂಚಿಗಳನ್ನು ಪುಸ್ತಕಗಳ ರೂಪದಲ್ಲಿ ಹೊರತಂದಿದೆ ಎಂದರು

ಪ್ರವಾಸೋದ್ಯಮ ಕೇಂದ್ರವು ಸಂಪೂರ್ಣವಾಗಿ ನೆಲಕಚ್ಚಿದ್ದು, ಇದರಲ್ಲಿ ಸುಮಾರು 35 ಲಕ್ಷ ಮಂದಿ ಅವಲಂಬಿತರಿದ್ದಾರೆ. ಪ್ರವಾಸೋದ್ಯಮ ಕ್ಷೇತ್ರ ಪುನರುಜ್ಜೀವನಗೊಳಿಸಿ , ಈ ಕ್ಷೇತ್ರವನ್ನು ಚೇತರಿಸಿಕೊಳ್ಳುವಂತೆ ಮಾಡುವ ಜವಾಬ್ದಾರಿ ನಮ್ಮದಾಗಿದೆ.

ಹೋಟೆಲ್, ರೆಸ್ಟೋರೆಂಟ್, ಜಂಗಲ್ ಲಾಡ್ಜಸ್, ಕೆ.ಎಸ್.ಟಿ.ಡಿ.ಸಿ. ಹೋಟೆಲ್‌ಗಳು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಆಗಿಂದಾಗ್ಗೆ ಹೊರಡಿಸುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕೆಂದು ಸೂಚಿಸಿದರು.

ಪ್ರವಾಸೋದ್ಯಮ, ಕೃಷಿ ಹಾಗೂ ತೋಟಗಾರಿಕೆ ಇಲಾಖೆಯ ಸಹಯೋಗದಲ್ಲಿ " ಅಗ್ರೀ ಟೂರಿಸಂ" ನ್ನು ಜಾರಿಗೆ ತರಲು ಉದ್ದೇಶಿಸಲಾಗಿದ್ದು, ಈ ಬಗ್ಗೆ ಸ್ಪಷ್ಟ ರೂಪುರೇಷೆ ತಯಾರಿಸಲಾಗುತ್ತಿದೆ ಎಂದು ಸಹ ಸಚಿವರು ತಿಳಿಸಿದರು.

ಪ್ರಾಥಮಿಕವಾಗಿ ಕರ್ನಾಟಕದ ಯಾವುದಾದರೂ ಒಂದು ಸ್ಥಳವನ್ನು ಆಯ್ಕೆ ಮಾಡಿಕೊಂಡು ಸ್ಥಳೀಯರ ಸಹಭಾಗಿತ್ವದಲ್ಲಿ ಇದನ್ನು ಯಸಸ್ವಿಗೊಳಿಸಲಾಗುವುದು. ಇದರಿಂದ ನಗರ ವಾಸಿಗಳಿಗೆ ಕೃಷಿ ಚಟುವಟಿಕೆಗಳ ಅನುಭವ ಮೂಡಿಸುವುದರೊಂದಿಗೆ, ರೈತರ ಆದಾಯವನ್ನು ದ್ವಿಗುಣಗೊಳಿಸುವ ಉದ್ದೇಶವನ್ನು ಹೊಂದಲಾಗಿದೆ ಎಂದರು.

ಶ್ರೀಮಂತ ಬಂಜಾರ ಸಂಸ್ಕೃತಿಯನ್ನು ಪ್ರವಾಸಿಗರಿಗೆ ಪರಿಚಯಿಸುವ ದೃಷ್ಟಿಯಿಂದ ಕೊಪ್ಪಳದ ಬಹದ್ದೂರ ಬಾಂಡಾ ಸ್ಥಳದಲ್ಲಿ ಬಂಜಾರ ಕಲ್ಚರಲ್ ಹೆರಿಟೇಜ್‌ನ್ನು ಸಮಾಜ ಕಲ್ಯಾಣ ಇಲಾಖೆ ಹಾಗೂ ತಾಂಡಾ ಅಭಿವೃದ್ಧಿ ನಿಗಮದ ಸಹಯೋಗದೊಂದಿಗೆ ಸ್ಥಾಪಿಸಲು ಯೋಜನಾ ವರದಿ ತಯಾರಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಬಂಜಾರ ಕಲ್ಚರಲ್ ಹೆರಿಟೇಜ್ ಮಾದರಿಯಲ್ಲಿ ಪರಿಶಿಷ್ಟ ಜಾತಿ- ಪರಿಶಿಷ್ಟ ಪಂಗಡದ ವಿಶಿಷ್ಟ ಸಂಸ್ಕೃತಿಯನ್ನು, ಜನಪದ ಕಲೆ, ಆಚಾರ-ವಿಚಾರ, ಆಹಾರ ಪದ್ಧತಿಯನ್ನು ಪ್ರವಾಸಿಗರಿಗೆ ಪರಿಚಯಿಸುವ ದೃಷ್ಟಿಯಿಂದ ಹಾಗೂ ಜನಪದ ಕಲೆಗಳನ್ನು ಪುನಶ್ಚೇತನಗೊಳಿಸುವ ನಿಟ್ಟಿನಲ್ಲಿ ಆದಿವಾಸಿ ಕಲ್ಚರಲ್ ಹೆರಿಟೇಜ್ ಅನ್ನು ರಾಮನಗರದಲ್ಲಿರುವ ಜಾನಪದ ಲೋಕಕ್ಕೆ ಹೊಂದಿಕೊಂಡಿರುವ ಸ್ಥಳದಲ್ಲಿ ಸ್ಥಾಪಿಸಲು ಉದ್ದೇಶಿಸಿದೆ ಎಂದರು.

## ವಾಹನ ಅರ್ಹತಾ ಪತ್ರ ನವೀಕರಿಸಲು ಶಾಲೆಗಳಿಗೆ ಸೂಚನೆ

**ಬೆಂಗಳೂರು, ಜೂನ್ 6 (ಕರ್ನಾಟಕ ವಾರ್ತೆ)**

ರಾಜ್ಯದಲ್ಲಿ  ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಶಾಲೆಗಳಲ್ಲಿ ಸಾರಿಗೆ ಸೌಲಭ್ಯ ಒದಗಿಸುತ್ತಿರುವ ಶಾಲಾ ವಾಹನಗಳ (ಖಾಸಗಿ ಮಾಲೀಕತ್ವದಲ್ಲಿರುವ ವಾಹನಗಳೂ ಸೇರಿದಂತೆ) ಅರ್ಹತಾ ಪತ್ರ ನವೀಕರಣ ಕಾರ್ಯವನು ಆದ್ಯತೆಯ ಮೇರೆಗೆ ತ್ವರಿತವಾಗಿ ನಿರ್ವಹಿಸಬೇಕಾಗಿದ್ದು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ಎಲೆಕ್ಟ್ರಾನಿಕ್ಸ ಸಿಟಿ, ಬೆಂಗಳೂರು ಇವರ ವ್ಯಾಪ್ತಿಗೆ ಬರುವ ಬನ್ನೇರುಘಟ್ಟ ರಸ್ತೆ, ಹೊಸೂರು ರಸ್ತೆ, ಸರ್ಜಾಪುರ ರಸ್ತೆಯಲ್ಲಿನ ಎಲ್ಲಾ ಶಾಲಾ ಕಾಲೇಜುಗಳ ಪ್ರಾಂಶುಪಾಲರಿಗೆ ತಮ್ಮ ವಿದ್ಯಾಸಂಸ್ಥೆಯ ವಾಹನಗಳ ಅರ್ಹತಾ ಪತ್ರ ನವೀಕರಣವನ್ನು ಜೂನ್ 15 ರೊಳಗಾಗಿ ಮಾಡಿಸಿಕೊಳ್ಳುವಂತೆ ಮತ್ತು ಪರೀಕ್ಷಾ ಸಮಯದಲ್ಲಿ ಶಾಲಾ ವಾಹನಗಳ ಅರ್ಹತಾಪತ್ರಗಳು ಸಿಂಧುತ್ವದಲ್ಲಿರುವಂತೆ ಕ್ರಮವಹಿಸಲು ಅಧಿಕೃತ ಪ್ರಕಟಣೆ ತಿಳಿಸಿದೆ.

## ಎಸ್.ಎಸ್.ಎಲ್.ಸಿ. ಸಹಾಯವಾಣಿ

**ಬೆಂಗಳೂರು, ಜೂನ್ 6 (ಕರ್ನಾಟಕ ವಾರ್ತೆ)**

ಜೂನ್/ಜುಲೈ –2020 ರ ಎಸ್.ಎಸ್.ಎಲ್.ಸಿ. ಪರೀಕ್ಷೆ ಜೂನ್ 26 ರಿಂದ ಜುಲೈ 7 ರ ವರೆಗೆ ನಡೆಯಲಿದೆ.  ಕೋವಿಡ್ –19 ರ ಹಿನ್ನಲೆಯಲ್ಲಿ ವಿದ್ಯಾರ್ಥಿಗಳು ಯಾವುದೇ ಆತಂಕವಿಲ್ಲದೆ ಪರೀಕ್ಷಾ ಕೇಂದ್ರಕ್ಕೆ ಹಾಜರಾಗಿ ಪರೀಕ್ಷೆ ಬರೆಯಲು ಸಹಕಾರಿಯಾಗುವಂತೆ  ವಿದ್ಯಾರ್ಥಿಗಳು/ಪೋಷಕರು/ಸಾರ್ವಜನಿಕರು/ಸಂಘ ಸಂಸ್ಥೆಗಳು ಎಸ್.ಎಸ್.ಎಲ್.ಸಿ. ಪರೀಕ್ಷೆ ಕುರಿತು ಸಂದೇಹ/ದೂರುಗಳು/ಸಲಹೆಗಳು ಆಲಿಸಲು ಬೆಂಗಳೂರು ಉತ್ತರ ಶೈಕ್ಷಣಿಕ ಜಿಲ್ಲೆ ವ್ಯಾಪ್ತಿಯಲ್ಲಿ ಈ ಕೆಳಕಂಡಂತೆ ಸಹಾಯವಾಣಿಗಳು ಪ್ರಾರಂಭಿಸಲಾಗಿದೆ.

ಶ್ರೀಮತಿ ಮಾಲತಿ, ಆಪ್ತ ಸಹಾಯಕರು, ಉ. ನಿ ಕಚೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಉತ್ತರ ಜಿಲ್ಲೆ –080–22215312 , ಜಯಪ್ರಕಾಶ್ ಶಿಕ್ಷಣಾಧಿಕಾರಿಗಳು ಹಾಗೂ ಎಸ್.ಎಸ್.ಎಲ್.ಸಿ. ಜಿಲ್ಲಾ ನೋಡಲ್ ಅಧಿಕಾರಿ, ಉ. ನಿ. ಕಚೇರಿ, ಸಾಶಿಇ– 8197816806, ರಮೇಶ್ ಬಿಇಓ ಉವ–1 9448999496, ಶ್ರೀಮತಿ ನಂದಿನಿ, ಎಸ್.ಎಸ್.ಎಲ್.ಸಿ. ಪರೀಕ್ಷೆ ನೋಡೆಲ್ ಅಧಿಕಾರಿ (ಉ.ವ–1 ವ್ಯಾಪ್ತಿ –9980133466) ಶ್ರೀಮತಿ ಉಮಾದೇವಿ ಎಸ್.ಸಿ. ಬಿ.ಇ.ಓ ಉ–ವ–2– 9448999448, ಸತೀಶ್, ಎಸ್.ಎಸ್.ಎಲ್.ಸಿ. ಪರೀಕ್ಷೆ ನೋಡೆಲ್ ಅಧಿಕಾರಿ (ಉವ–2 ವ್ಯಾಪ್ತಿ)–7019269599, ಡಿ. ಕೃಷ್ಣ, ಬಿ.ಇ.ಓ. ಉ–ವ3 ಶಿವಾಜಿನಗರ 9480695022, ಶ್ರೀಮತಿ ಗೌರಿ ವೆಂಕಾಭಟ್, ಎಸ್.ಎಸ್.ಎಲ್.ಸಿ. ಪರೀಕ್ಷೆ ನೋಡಲ್ ಅಧಿಕಾರಿ (ಉ–ವ3 ರ ವ್ಯಾಪ್ತಿ)– 9448738032, ಟಿ.ಎನ್. ಕಮಲಾಕರ, ಬಿಇಓ ಉ.ವ–4 ಯಲಹಂಕ– 9480695023, ಜಗದೀಶ್ ಎಸ್.ಎಸ್.ಎಲ್.ಸಿ. ಪರೀಕ್ಷೆ ನೋಡಲ್ ಅಧಿಕಾರಿ (ಉ.ವ–4 ರ ವ್ಯಾಪ್ತಿ)– 9590011955.

## ಗಾಂಧಿಭವನದಲ್ಲಿ ಕರೋನಾ ವಾರಿಯರ್ಸ್‌ಗೆ ನಮನ ಹಾಗೂ  ಅಗಲಿದ ಗಣ್ಯರಿಗೆ ಶ್ರದ್ಧಾಂಜಲಿ ಸಲ್ಲಿಕೆ

**ಬೆಂಗಳೂರು, ಜೂನ್ 6 (ಕರ್ನಾಟಕ ವಾರ್ತೆ)**

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯಿಂದ ಕೋವಿಡ್ –19 ವಾರಿಯರ್ಸ್ ಸೇವೆ ಸಲ್ಲಿಸುತ್ತಿರುವ ವೈದ್ಯರು, ದಾದಿಯರು, ಕಾರ್ಮಿಕರು, ಮಾಧ್ಯಮದವರುಮ, ಸೇವಾಕಾರ್ಯಕರ್ತರು, ಮುಖ್ಯಮಂತ್ರಿಗಳ ಕಾರ್ಯಾಲಯ ವಿದ್ಯುತ್ ಇಲಾಖಾ ಸಿಬ್ಬಂದಿ, ನೀರು ನೈರ್ಮಲ್ಯ ಸಿಬ್ಬಂದಿ ವರ್ಗ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಪೊಲೀಸ್ ಇಲಾಖೆ, ಸೆಕ್ಯುರಿಟಿ ಗಾರ್ಡ್‌ಗಳು ಹಾಗೂ ಇನ್ನಿತರ ಇಲಾಖೆಯ ತಾಂತ್ರಿಕ ಸಿಬ್ಬಂದಿ ವರ್ಗದವರಿಗೆ ನಮನ ಸಲ್ಲಿಸಲಾಯಿತು. ನಮ್ಮನ್ನಗಲಿದ ಗಣ್ಯರಾದ ಡಾ: ಪಾಟೀಲ ಪುಟ್ಟಪ್ಪ, ಡಾ: ಎಂ.ವಿ. ರಾಜಶೇಖರ್, ಡಾ: ಕೆ. ಎಸ್. ನಿಸಾರ್ ಅಹಮದ್, ಮಹೇಂದ್ರಕುಮಾರ್ ಅವರುಗಳಿಗೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು ಎಂದು ಪ್ರಕಟಣೆ ತಿಳಿಸಿದೆ.

## The webinar on **" ARE WE FUELING THE FUTURE"**

On the occasion of World Environment Day, 2020, Dr.A.N.Yellappa Reddy, IFS, Former Secretary to Forest, Ecology and Environment, Govt. of Karnataka and noted Environmentalist has delivered a luminous lecture on **" ARE WE FUELING THE FUTURE"** He dwelt in detail about Environmental Conservation, Biodiversity, threats of indiscriminate use of Plastic, Self sustainability and by quoting Rig-Veda 'Self morality' as need of the hour to curtail future eventualities like COVID-19 pandemic. He has also emphasized the need for Restoration and Recharging of water bodies to conserve Aquatic organisms and improvement of ground water table.

Dr. M. Jayashankar, Asst. Professor St. Joseph's College, Bengaluru, has delivered excellent lecture on **"Threats to Biodiversity,Climate Change and Global warming"**. Prof. Dr. M.S. Reddy has welcomed the speakers and participants. He announced that Maharani Cluster University will initiate planting and conservation as co-curricular activities. Dr. A.N. Yellappa Reddy appreciated the initiative and observed that the activity should be 'Voluntary' in nature.

Over 100 learned scholars, faculties, students across the country have participated, interacted with speakers and were benefited by the webinar.

Dr. G.S. Rajanna co-ordinated the webinar, Dr. R. NageshBabu offered logistics, Dr. F. ShafiaHoor hasmoderated, Mr. B.S.Pradeep delivered vote of thanks.

MAHARANI CLUSTER UNIVERSITY has organized the webinar. The program was concluded with loud message To'Save and Conserve Plant and Animal communities, Soil, Air and Water bodies for food security and livelywood on Mother Earth'.

**ಸಚಿವರ ಪ್ರವಾಸ**

**ಬೆಂಗಳೂರು, ಜೂನ್ 6 (ಕರ್ನಾಟಕ ವಾರ್ತೆ)**

ಬೃಹತ್ ಮತ್ತು ಮಧ್ಯಮ ಮತ್ತು ಕೈಗಾರಿಕಾ ಹಾಗೂ ಸಾರ್ವಜನಿಕ ಉದ್ದಿಮೆ ಸಚಿವರು ಜೂನ್ 7 ರಂದು ಬೆಂಗಳೂರಿನಿಂದ ಹುಬ್ಬಳ್ಳಿಗೆ ಪ್ರಯಾಣ ಕೈಗೊಳ್ಳುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.